“ಬೋಳಿ ಮಕ್ಳು ಸಾರ್. ಮೂರು ತಿಂಗಳ ಹಿಂದೆನೇ ನೀವು ಪತ್ರ ಬರದ್ರಿ. ನಾನು ಅದನ್ನು ಹಿಡ್ಕಂಡು ಅಡ್ವಾನ್ಸ್ ಕೊಡಿ ಅಂತ ಅವುಗಳ ಮುಂದೆ ನಿಂತ್ಕಂಡೆ. ದಕ್ಷಿಣೆ ಇಸ್ಕೊಂಡ್ವೇ ಹೊರತು, ದುಡ್ಡು ಮಾತ್ರ ಕೊಡಲಿಲ್ಲ. ದರಿದ್ರದವು. ಇರ್ಲಿ ಬಿಡಿ ಸಾ. ದೇವರು ಇದ್ದಾನೆ. ನಿಮ್ದೇನು ತಪ್ಪಿಲ್ಲ ಬಿಡಿ ಸಾರ್. ನಮ್ ಖಫಿಲ್‌ಗೆ ಫೋನ್ ಮಾಡ್ತೀನಿ. ಎಲ್ಲರಿಗೂ ಬೇಕಾದವನು. ಹಾಗೇ ನಮ್ ಶಾಸ್ತ್ರಿನೂ ಕರಸ್ತೀನಿ. ಊರಿಗೆಲ್ಲಾ ಬೇಕಾದವನು” ಅಂದ ರಾಮಸ್ವಾಮಿ. ಅಲ್ಲಿಂದಲೇ ಒಂದ್ ಫೋನ್ ಮಾಡಿ, “ಏ ಖಫೀಲ್ ಬೇಗ ದೊಡ್ಡ ಆಸ್ಪತ್ರೆ ಹತ್ರ ಬಾರೋ... ಏ ಈಗಲೇ ಬಾರೋ ಗೂಬೆ” ಎಂದು ಕಟ್ ಮಾಡಿದ. ಇನ್ನೊಂದು ನಂಬರ್ ಟ್ರೈ ಮಾಡಿದ. “ಶಾಸ್ತ್ರಿ ಫೋನ್ ರಿಂಗಾಗ್ತಿದೆ. ತಗೋತ್ತಿಲ್ಲ. ನಾನ್ ವ್ಯವಸ್ಥೆ ಮಾಡ್ತೀನಿ ಸಾರ್. ನಿಮ್ಮ ತಪ್ಪೇನು ಇಲ್ಲಾ. ಎಲ್ಲಾ ಈ ಬೇವರ್ಸಿಗಳ ಸಹವಾಸ” ಎನ್ನುತ್ತಾ ಹೊರಟ. “ರಾಮಸ್ವಾಮಿಗಳೇ, ಐಸಿಯು ಸ್ಟಾಫ್‌ಗೆ ತೊಂದರೆಯಾಗಬಾರದು ಪ್ಲೀಸ್” ಎಂದರು ರಾಘವನ್. “ಸಾರ್, ಎಲ್ಲಾದರೂ ಉಂಟೆ! ನೀವು ನನಗೆ ಹೇಳಿದ್ದೀರಿ ತಾನೆ. ಆ ಇನ್‌ಸ್ಪೆಕ್ಟರ್‌ಗೂ ಫೋನ್ ಮಾಡ್ತೀನಿ. ನೀವು ತಲೆಕೆಡಿಸಿಕೊಳ್ಳಬೇಡಿ” ಅಂದವನು ಇನ್ನೊಂದು ನಂಬರ್ ಒತ್ತಿ, “ಸಾರ್, ನಮಸ್ಕಾರ. ನಾನು ರಾಮಸ್ವಾಮಿ, ಚೆನ್ನಾಗಿದ್ದೀರ ಸಾರ್...” ಎನ್ನುತ್ತಾ ಬಾಗಿಲೆಳೆದುಕೊಂಡು ಹೊರಟು ಹೋದ.

ಅವನು ಎಳೆದುಕೊಂಡ ಹೋದ ಬಾಗಿಲನ್ನೇ ನೋಡ್ತಾ ಕೂತ ರಾಘವನ್ನರಿಗೆ ಷರೀಫ್

